# ಸಹಾಯ ಮಾಡುತ್ತಾ ಕಲಿಯುವುದು





**ಸುರೇಶ್ ಕುಮಾರ್ ಸಾಹು, ರಾಕೇಶ್ ತೇತಾ, ಗುಲ್ಷನ್ ಯಾದವ್**

ಛತ್ತೀಸಗಡ ರಾಜ್ಯದ ಮಧ್ಯಭಾಗದಲ್ಲಿರುವ ಧಮ್ತುರಿ ಜಿಲ್ಲೆಯು ವೈವಿಧ್ಯಮಯ ಭೌಗೋಳಿಕ ಹಾಗೂ ಸಾಮಾಜಿಕ ಲಕ್ಷಣಗಳನ್ನು ಹೊಂದಿರುವ ಪ್ರದೇಶ. ಈ ಜಿಲ್ಲೆಯ ಅತ್ಯಂತ ಮುಖ್ಯವಾದ ಹಾಗೂ ಫಲವತ್ತಾದ ಭಾಗ ಮಹಾನದಿ ಕಣಿವೆ ಪ್ರದೇಶದಲ್ಲಿ ಬರುತ್ತದೆ. ಈ ಪ್ರದೇಶದಲ್ಲಿ ನೀರಾವರಿ ಆಧಾರಿತ ಭತ್ತದ ಕೃಷಿ ಇಲ್ಲಿನ ಜನಗಳ ಬದುಕಿಗೆ ಪ್ರಮುಖ ಆಸರೆ. ಜಿಲ್ಲೆಯ ದಕ್ಷಿಣ ಭಾಗದಲ್ಲಿ ದಟ್ಟಕಾಡನ್ನು ಹೊದ್ದಿರುವ ಬೆಟ್ಟ ಗುಡ್ಡಗಳ ಪ್ರದೇಶವಿದೆ. ಈ ಭಾಗದ ಮಂದಿಗೆ ಕಾಡಿನಲ್ಲಿ ಸಿಗುವ ಕಿರು ಉತ್ಪನ್ನಗಳ ಸಂಗ್ರಹಣೆ ಜೀವನೋಪಾಯಕ್ಕೆ ಹೆಚ್ಚುವರಿ ಆಸರೆ. ಇಲ್ಲಿ ನೀರಾವರಿ ಕಡಿಮೆಯಿರುವುದರಿಂದ ಬದುಕುಳಿಯಲು ಎಷ್ಟು ಬೇಕೋ ಅಷ್ಟು ಕೃಷಿ ಮಾಡುತ್ತಾರೆ. ಈ ಜಿಲ್ಲೆಯ ಮತ್ತೊಂದು ಪ್ರದೇಶದಲ್ಲಿ ಮಧ್ಯ ಛತ್ತೀಸಗಡದ ನಾಲ್ಕು ಮಧ್ಯಮ ಹಾಗೂ ದೊಡ್ಡ ಅಣೆಕಟ್ಟುಗಳಿವೆ. ಈ ಅಣೆಕಟ್ಟುಗಳ ನಿರ್ಮಾಣದಿಂದ ಅನೇಕ ಹಳ್ಳಿಗಳು ಸ್ಥಳಾಂತರಗೊಂಡಿವೆ ವಸತಿಯನ್ನು ಕಳೆದುಕೊಂಡ ಹಲವು ಹಳ್ಳಿಗಳಿಗೆ ಇನ್ನೂ ಪುನರ್ವಸತಿಯನ್ನು ಕಲ್ಪಿಸಿಲ್ಲ. ಈ ಅಣೆಕಟ್ಟುಗಳ ಅಚ್ಚುಕಟ್ಟು ಪ್ರದೇಶದ ಬಹುತೇಕ ಜನರಿಗೆ ಮೀನುಗಾರಿಕೆ ಪ್ರಮುಖ ಚಟುವಟಿಕೆಯಾಗಿದೆ.

ಮೇಲೆ ಹೇಳಿದ ಈ ಮೂರು ಸ್ಪಷ್ಟ ಕೃಷಿ – ಜೀವಿಪರಿಸರ ಲಕ್ಷಣಗಳು ಈ ಪ್ರದೇಶದ ಜನರ ಜೀವನೋಪಾಯದ ಮೇಲೆ ಪ್ರಭಾವ ಬೀರುತ್ತಿವೆ. ಇಲ್ಲಿನ ಜನರ ಬದುಕನ್ನು ನಗರೀಕರಣ ಕೂಡ ಪ್ರಭಾವಿಸುತ್ತಿವೆ. ಅದರಲ್ಲೂ ಜಿಲ್ಲೆಯಲ್ಲಿ ಬೆಳೆಯುತ್ತಿರುವ ಸಣ್ಣ ಸಣ್ಣ ಪಟ್ಟಣ ಪ್ರದೇಶಗಳಿಗೆ ಹತ್ತಿರ ಇರುವ ಪ್ರದೇಶಗಳಲ್ಲಿ ಇದರ ಪ್ರಭಾವ ಹೆಚ್ಚು. ಈ ಮೂರು ಪ್ರದೇಶಗಳಲ್ಲಿನ ಜನಸಂಖ್ಯೆಯಲ್ಲೂ ಒಂದು ವಿನ್ಯಾಸವಿರುವುದನ್ನು ಕಾಣಬಹುದು. ಕೃಷಿ ಪ್ರಧಾನವಾದ ಮಹಾನದಿ ಕಣಿವೆ ಪ್ರದೇಶದಲ್ಲಿ ಇತರ ಹಿಂದುಳಿದ ವರ್ಗದವರು ಬಲು ಸಂಖ್ಯೆಯಲ್ಲಿದ್ದರೆ ಬುಡಕಟ್ಟು ಜನಾಂಗದವರ ಸಂಖ್ಯೆ ಇನ್ನೆರಡು ಅರಣ್ಯ ಪ್ರದೇಶ ಹಾಗೂ ಅಣೆಕಟ್ಟು ಪ್ರದೇಶಗಳಲ್ಲಿ ಹೆಚ್ಚಿದೆ.

ಇಲ್ಲಿನ ವೈವಿಧ್ಯಮಯ ಜೀವನೋಪಾಯ ವಿನ್ಯಾಸಗಳ ನಕಾಶೆ ತಯಾರಿಸಲು ಮತ್ತು ಈ ಭಾಗದ ಜನರ ಬದುಕನ್ನು ಪ್ರಭಾವಿಸುತ್ತಿರುವ ಅಂಶಗಳನ್ನು ತಿಳಿಯಲು ಒಂದು ಅಧ್ಯಯನವನ್ನು ನಡೆಸಲಾಗುತ್ತಿದೆ. ಆಯ್ದ ಕೆಲವು ಮಾದರಿ ಕುಟುಂಬಗಳಿಂದ ಈ ಮಾಹಿತಿಗಳನ್ನು ಸಂಗ್ರಹಿಸಲು ಕೆಲವು ಮಾದರಿ ಹಳ್ಳಿಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಈ ಅಧ್ಯಯನಕ್ಕೆ ಮಿಶ್ರ ವಿಧಾನಗಳನ್ನು ಬಳಸಲಾಗಿದೆ. ಈ ವಿಧಾನಗಳೆಂದರೆ ಕುಟುಂಬಗಳ ಸಮೀಕ್ಷೆ, ಉದ್ದೇಶಿತ ಗುಂಪುಗಳೊಂದಿಗೆ ಚರ್ಚೆಗಳು, ಸಂದರ್ಶನಗಳು ಮತ್ತು ಸಹಭಾಗಿ ಸ್ವಸ್ಥತೆಗಳ ವರ್ಗೀಕರಣ.

ಮಾಹಿತಿ ಸಂಗ್ರಹಣೆಯ ಪ್ರಕ್ರಿಯೆಯಲ್ಲಿ ಮಕ್ಕಳನ್ನು ಬಳಸಿಕೊಳ್ಳಲು ನಾವು ನಿರ್ಧರಿಸಿದೆವು. ಇದನ್ನು ನಿರ್ಧರಿಸಿದ ನಂತರ ಮಕ್ಕಳು ಮಾಹಿತಿ ಸಂಗ್ರಹಿಸುವಾಗ ಈ ಕೆಳಕಂಡ ಮೂರು ವಿಧಾನದ ಸಾಧನಗಳನ್ನು ಬಳಸಲು ನಿರ್ಧರಿಸಲಾಯಿತು:

ಅ) ದೈನಿಕ ವೇಳಾಪಟ್ಟಿ: ಇದು ವಯಸ್ಕರು ಹಾಗೂ ಮಕ್ಕಳಲ್ಲಿ, ಕೆಲಸ ನೀಡಿಕೆಯಲ್ಲಿ ಲಿಂಗಾಧಾರಿತ ತಾರತಮ್ಯತೆಯನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ. ಪ್ರತಿ ಹಳ್ಳಿಯಿಂದ ಹತ್ತು ಮಕ್ಕಳನ್ನು (ಐವರು ಹುಡುಗರು ಮತ್ತು ಐವರು ಹುಡುಗಿಯರು) ಈ ಕೆಲಸ ವನ್ನು ಕೈಗೊಂಡಿರುತ್ತಾರೆ.

ಆ) ಹಳ್ಳಿಗಳ ಮಾಹಿತಿ: ಹಳ್ಳಿಯ ಜನಸಂಖ್ಯೆ ವೈವಿಧ್ಯ, ಸಾಮಾಜಿಕ, ಆರ್ಥಿಕ, ಭೌಗೋಳಿಕ ಮತ್ತು ಮೂಲಸೌಕರ್ಯಗಳ ಮಾಹಿತಿಯನ್ನು ಸಂಗ್ರಹಿಸಲು ನಮೂನೆಯೊಂದನ್ನು ಸಿದ್ಧಗೊಳಿಸಿಕೊಳ್ಳಲಾಯಿತು. ಈ ಕೆಲಸಕ್ಕೆ ಪ್ರತಿ ಹಳ್ಳಿಯಿಂದ ನಾಲ್ಕರಿಂದ ಆರು ಮಕ್ಕಳ ಒಂದು ಅಥವ ಎರಡು ತಂಡಗಳನ್ನು ಆಯ್ಕೆ ಮಾಡಲಾಯಿತು.

ಇ) ಋತುಮಾನದ ಕ್ಯಾಲೆಂಡರ್: ಕೃಷಿ ಪದ್ಧತಿಗಳು, ಬೆಳೆಗಳ ಆವರ್ತನೆ, ಋತುಮಾನಕ್ಕನುಗುಣವಾಗಿ ಕಾಣಿಸಿಕೊಳ್ಳುವ ಆರೋಗ್ಯಸಂಬಂಧಿ ಸಮಸ್ಯೆಗಳು, ಕಿರು ಅರಣ್ಯ ಉತ್ಪನ್ನಗಳ (MFPs) ಲಭ್ಯತೆ, ಸ್ಥಳೀಯ ಹಬ್ಬಗಳು ಹಾಗೂ ಜಾತ್ರೆಗಳು, ವರ್ಷದ ವಿವಿಧ ತಿಂಗಳುಗಳಲ್ಲಿ ಸಿಗುವ ತರಕಾರಿಗಳು ಹಾಗೂ ಹಣ್ಣುಗಳು ಇವುಗಳನ್ನು ಕುರಿತಾದ ಮಾಹಿತಿ ಸಂಗ್ರಹಣೆ. ಇದಕ್ಕಾಗಿ ಪ್ರತಿ ಹಳ್ಳಿಯಿಂದ ಒಂದು ಅಥವ ಎರಡು ಮಕ್ಕಳ ತಂಡಗಳನ್ನು ಆಯ್ಕೆ ಮಾಡಲಾಯಿತು.

ಮೂವತ್ತೆರಡು ಹಳ್ಳಿಗಳಿಂದ ಎಂಟನೆಯ ತರಗತಿಯ ಸುಮಾರು ೩೦೦ ಮಕ್ಕಳು ಇದರಲ್ಲಿ ಭಾಗವಹಿಸಿದ್ದರು. ಆರಂಭದಲ್ಲಿ ನಮಗೆ ಮಕ್ಕಳ ಭಾಗವಹಿಸುವಿಕೆ ಹಾಗೂ ಮಾಹಿತಿ ಸಂಗ್ರಹದ ಗುಣಮಟ್ಟದ ಬಗ್ಗೆ ಖಾತರಿ ಇರದಿದ್ದುದರಿಂದ ನಮಗೆ ಅಷೊಂದು ಭರವಸೆಯಿರಲಿಲ್ಲ. ಆದರೆ ಆರಂಭದಲ್ಲಿ ಮಕ್ಕಳು ತೋರಿದ ಉತ್ಸಾಹದಿಂದ ಹಿಡಿದು ಸಂಗ್ರಹಸಿದ್ದ

ಮಾಹಿತಿಯ ಗುಣಮಟ್ಟದವರೆಗೆ ನಮ್ಮ ಅನುಭವಗಳು ನಿಜಕ್ಕೂ ಪ್ರೋತ್ಸಾಹದಾಯಕವಾಗಿದ್ದವು. ಸಂಶೋಧನಾ ನೀತಿಧರ್ಮಗಳ ಪಾಲನೆ ನಮ್ಮ ಮುಂದಿದ್ದ ಮತ್ತೊಂದು ಸಮಸ್ಯೆ.

ಮಕ್ಕಳಿಗೆ ಶಾಲೆಯ ಚೌಕಟ್ಟಿನೊಳಗೆ ತಮ್ಮದೇ ಪರಿಸರ ದೊಂದಿಗೆ ಸಂಪರ್ಕ ಕಲ್ಪಿಸಿಕೊಳ್ಳಲು ಅವಕಾಶವಿಲ್ಲದಿರುವ ಬಗ್ಗೆ ನಮಗಿದ್ದ ತಿಳುವಳಿಕೆಯ ಆಧಾರದ ಮೇಲೆ ಅಂತಿಮವಾಗಿ ಈ ಭಯ ಇದ್ದರೂ ನಮ್ಮ ಕೆಲಸದಲ್ಲಿ ಮುಂದುವರೆಯಲು ನಿರ್ಧರಿಸಿದೆವು. ಈ ಸಂಪರ್ಕರಾಹಿತ್ಯವನ್ನು ಹಲವರು ಈ ಮೊದಲೇ ಗುರುತಿಸಿದ್ದಾರೆ. ಇದೇ ಮಕ್ಕಳಿಗೆ ಶಾಲೆಯ ಪಾಠ ಇತ್ಯಾದಿ ಯಲ್ಲಿ ನಿರಾಸಕ್ತಿ ಉಂಟಾಗಲು ಕಾರಣ ಎಂದು ಕೂಡ ಗುರುತಿಸಿದ್ದಾರೆ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು – 2005 ಈ ಸಮಸ್ಯೆಯನ್ನು ಶಾಲಾ ವ್ಯವಸ್ಥೆಯಲ್ಲಿರುವ 'ಹೊಂದಿಕೊಳ್ಳಲಾಗದ ಗುಣ' ಎಂದು ಗುರುತಿಸುತ್ತದೆ. ಇಲ್ಲಿ 'ಕಲಿಕೆಯು ಪ್ರತ್ಯೇಕಿತ ಚಟುವಟಿಕೆಯಾಗಿದ್ದು ಮಕ್ಕಳು ತಾವು ಕಲಿತ ತಿಳಿವಳಿಕೆಯನ್ನು ತಮ್ಮ ಬದುಕಿಗೆ ಸಂಬಂಧಿಸಿ ನೋಡುವ ಅವಕಾಶವನ್ನು ನೀಡುತ್ತಿಲ್ಲ'. ಶಾಲೆಗಳಲ್ಲಿನ ಪ್ರಕ್ರಿಯೆಗಳು 'ಹೊಸ ಜ್ಞಾನವನ್ನು ಸೃಷ್ಟಿಸುವ ಮನುಷ್ಯನ ಸಾಮರ್ಥ್ಯದ ಪ್ರಮುಖ ಆಯಾಮಗಳನ್ನು ಅಷ್ಟಾಗಿ ಗಮನಿಸುವುದಿಲ್ಲ'. 'ಸೃಜನಶೀಲ ಆಲೋಚನೆ ಮತ್ತು ಒಳನೋಟಗಳ ಸಾಮರ್ಥ್ಯವನ್ನು ನಿರುತ್ಸಾಹಗೊಳಿಸುವ ಕಟ್ಟುನಿಟ್ಟಾದ ವ್ಯವಸ್ಥೆಯನ್ನು ಉತ್ತೇಜಿಸುತ್ತಿದೆ'. ಮಗುವಿನ ಬದುಕಿನ ಸನ್ನಿವೇಶಗಳನ್ನು ಕೈಬಿಟ್ಟು. 'ಇಲ್ಲಿ ಕಲಿಕೆ ಎನ್ನುವುದು ವಿದ್ಯಾರ್ಥಿಗಳು ಮತ್ತು ಪೋಷಕರ ಮೇಲೆ ಹೊರೆ ಮತ್ತು ಒತ್ತಡವಾಗಿದೆ'.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು – 2005 ಇಂತಹ ಸಮಸ್ಯೆಗಳನ್ನು ಪರಿಹರಿಸಲು ಸಹ ತನ್ನ ವಿವಿಧ ವಿಭಾಗಗಳಲ್ಲಿ ಯತ್ನಿಸಿದೆ. ಉದಾಹರಣೆಗೆ ಸಾಮಾಜಿಕ ವಿಜ್ಞಾನಗಳ NFG, ಮಕ್ಕಳು ವಾಸಿಸುತ್ತಿರುವ ಸ್ಥಳೀಯ ಸಾಮಾಜಿಕ ಮತ್ತು ಜೀವಿಪರಿಸರ ಸನ್ನಿವೇಶಗಳನ್ನು ಒಳಗೊಂಡಿರಬೇಕು ಎಂದು ಒತ್ತಿಹೇಳುತ್ತದೆ. ಅದೇ ರೀತಿ ಕೆಲಸ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ವಸ್ತು ಸ್ಥಿತಿ ಪತ್ರಿಕೆಯು 'ಕೆಲಸ ಕೇಂದ್ರಿತವಾದ ಶಿಕ್ಷಣ'ದ ಸಾರ್ವತ್ರಿಕ ಕಾರ್ಯಕ್ರಮವನ್ನು ಜಾರಿಗೆ ತರಬೇಕು ಎಂದು ಹೇಳುತ್ತದೆ. ಈ ಕಾರ್ಯಕ್ರಮದ ಮೂಲತತ್ವವೆಂದರೆ ಇತರ ಎಲ್ಲಾ ಕೆಲಸಗಳ (ಉದಾಹರಣೆಗೆ, ಚಟುವಟಿಕೆಗಳು, ಪ್ರಯೋಗಗಳು, ಸಮೀಕ್ಷೆಗಳು, ಕ್ಷೇತ್ರಾಧಾರಿತ ಅಧ್ಯಯನ, ಸಾಮಾಜಿಕ ಕಾರ್ಯ, ಸಮುದಾಯದೊಂದಿಗೆ ಒಡನಾಟ ಇತ್ಯಾದಿ.,) ಜೊತೆಗೆ ಉತ್ಪಾದನಾ ಕೆಲಸಗಳನ್ನು ಬೋಧನಾ ಮಾಧ್ಯಮವಾಗಿ ಮುಖ್ಯ ಪಠ್ಯಕ್ರಮದ ಭಾಗವಾಗಿಸಬೇಕು ಎಂಬುದು.

ನಾವು ವಹಿಸಿದ ಕಾರ್ಯಗಳು ಮಕ್ಕಳಿಗೆ ತಮ್ಮ ಪರಿಸದೊಂದಿಗೆ ಸಂಬಂಧ ಕಲ್ಪಿಸುವ ಸದವಕಾಶಗಳನ್ನು ಒದಗಿಸುತ್ತದೆಂದು ಎಂದುಕೊಂಡಿದ್ದೆವು. ಮಕ್ಕಳು ಈ ಪ್ರಕ್ರಿಯೆಯಲ್ಲಿ ಮಾಹಿತಿಯ ವಿವಿಧ ಮೂಲಗಳನ್ನು ಗುರುತಿಸಿದರು, ಮಾಹಿತಿ ಸಂಗ್ರಹ (ಕೆಲವೊಮ್ಮೆ ಒಂದರೊಡನೊಂದು ಸ್ಪರ್ಧಿಸುವಂತಹ ಎರಡು ರೀತಿಯ ಮಾಹಿತಿಗಳು), ಅವುಗಳ ಪರಿಶೀಲನೆ ಮತ್ತು ಸಮನ್ವಯ, ಮಾಹಿತಿ ವಿಂಗಡಣೆ ಹಾಗೂ ವರ್ಗೀಕರಣವನ್ನು ಮಾಡಿದರು. ಅವರ ನಿಕಟ ಪರಿಸರದಲ್ಲಿನ ತಮಗೆ ನೇರವಾಗಿ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಜ್ಞಾನದ ಗ್ರಹಿಕೆ ಅವರಿಗೆ ಒದಗುತ್ತದೆ ಎಂದು ಊಹಿಸಬಹುದಾಗಿದೆ. ಮಕ್ಕಳು ತೊಡಗಿಕೊಂಡ ಕಾರ್ಯದಲ್ಲಿ ಹಲವು ಪ್ರಮುಖ ಪ್ರಕ್ರಿಯೆಗಳು ಜರುಗುತ್ತಿದ್ದವು. ಅವುಗಳಲ್ಲಿ ಕೆಲವನ್ನು ಮಕ್ಕಳ ಚಿಂತನೆಗಳನ್ನಾಧರಿಸಿ ಇಲ್ಲಿ ಚರ್ಚಿಸಲಾಗಿದೆ.

ಈ ಕೆಲಸದಲ್ಲಿ ಮಕ್ಕಳಿಗೆ ಹೆಚ್ಚು ಖುಷಿಕೊಟ್ಟದ್ದು ತಂಡವಾಗಿ ಕೆಲಸ ಮಾಡಿದ್ದು. ಮಕ್ಕಳು ಕೊಟ್ಟ ಕೆಲಸವನ್ನು ತಮ್ಮ ತಂಡದೊಳಗೆ ಹಂಚಿಕೊಂಡರು. ಕೆಲವರು ಹಳ್ಳಿಯ ಹಿರಿಯರೊಂದಿಗೆ ಮಾತಾಡುವ ಕೆಲಸವನ್ನು ವಹಿಸಿಕೊಂಡರು, ಕೆಲವರು ಹಳ್ಳಿಯ ಪಟ್ವಾರಿ ಅಥವ ನರ್ಸುಗಳೊಂದಿಗೆ ಅಥವ ಪಂಚಾಯತ್ ಕಾರ್ಯದರ್ಶಿಯೊಂದಿಗೆ ಮಾತನಾಡಿದರು. ಒಂದು ತಂಡವಾಗಿ ಕೆಲಸ ಮಾಡುವುದರಲ್ಲಿನ ಉಪಯೋಗಗಳು ಹಾಗೂ ಸವಾಲುಗಳು ತಮಗೆ ಈ ಮುಖ್ಯ ಕ್ಷೇತ್ರದ ಬಗ್ಗೆ ವಿಷಯಗಳನ್ನು ಕಲಿಸಿತೆಂದು ಮಕ್ಕಳು ಚಿಂತನೆ ನಡೆಸಿ ಹೇಳಿದರು. ಕೆಲವರು ತಮಗೆ ಕೆಲಸ ಮುಗಿಸಲು ಸಾಧ್ಯವಾಗದಿದ್ದಾಗ ಇತರರು ಸಹಾಯ ಮಾಡಿದರು ಎಂದು ಹೇಳಿದರು. ಕೆಲವೊಮ್ಮೆ ಗುಂಪಿನವರು ನಿರಾಸಕ್ತಿ ವಹಿಸಿದ ತಂಡದ ಸದಸ್ಯನ ಬಗ್ಗೆ ಬೇಸರ ವ್ಯಕ್ತಪಡಿಸಿದರು.

ತಾವು ಮಾಡುತ್ತಿದ್ದ ಕೆಲಸವನ್ನು ಗ್ರಾಮಸ್ಥರಿಗೆ ಮತ್ತು ಗ್ರಾಮದ ಕಾರ್ಯಕರ್ತರಿಗೆ ವಿವರಿಸಿದ್ದು ಅವರಿಗೆ ತಮ್ಮ ಸಂವಹನ ಕೌಶಲಗಳನ್ನು ಒರೆಗೆ ಹಚ್ಚುವ ಅವಕಾಶ ಒದಗಿಸಿತು. ಆದರೂ ಗ್ರಾಮಸ್ಥರು ಹಾಗೂ ಕಾರ್ಯಕರ್ತರು ಮಿಶ್ರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರೆಂದು ಮಕ್ಕಳು ಹೇಳಿದರು. ಕೆಲವರು ಕೆಲಸವನ್ನು ಸ್ವಾಗತಿಸಿ ಇವರ ಶ್ರಮವನ್ನು ಮೆಚ್ಚಿದರು. ಮತ್ತೆ ಕೆಲವರು ಅವರ ಉತ್ಸಾಹ ಕುಗ್ಗಿಸುವಂತೆ ಇದು ನಿಮ್ಮ ಕೆಲಸವಲ್ಲ ಶಾಲೆಯ ಪಾಠಗಳ ಕಡೆ ಗಮನಕೊಡಿ ಎಂದು ಹೇಳಿದರು. ಸ್ಪಷ್ಟವಾಗಿ ಆ ಸಮುದಾಯದ ಸದಸ್ಯರಲ್ಲಿ ಕಲಿಕೆಯೆಂದರೆ ಶಾಲೆಯ ಚೌಕಟ್ಟಿನಲ್ಲಿ ಮಾತ್ರ ಎನ್ನುವ ಭಾವ ಬಲವಾಗಿತ್ತು. ಆಸಕ್ತಿಕರ ವಿಷಯವೆಂದರೆ ನಾವು ಆರಂಭದಲ್ಲಿ ಶಿಕ್ಷಕರೊಂದಿಗೆ ಮಾತಾಡಿದಾಗ ಅವರಲ್ಲಿ ಹಲವರು ಈ ವಿಚಾರವನ್ನು ಸ್ವಾಗತಿಸಿದರು. ಕೆಲವರು ವಿದ್ಯಾರ್ಥಿಗಳ ಕೆಲಸದಲ್ಲಿ ನೆರವನ್ನು ಕೂಡ ನೀಡಿದರು.

ಹಲವು ಶಿಕ್ಷಕರು ನಗರದ ಶಾಲೆಗಳಲ್ಲಿನ ಮಕ್ಕಳ ಪ್ರಾಜೆಕ್ಟುಗಳ ಮಾದರಿಯನ್ನು ಉದಾಹರಣೆಗೆ ಕೊಡುತ್ತಾ ಇಲ್ಲಿನ ಮಕ್ಕಳಿಗೆ ಕೆಲಸಗಳನ್ನು ವಿವರಿಸಲು ಬಳಸಿಕೊಂಡು ಅದೇ ಆಧಾರದ ಮೇಲೆ ಈ ಮಕ್ಕಳ ಕೆಲಸವನ್ನು ಮೌಲ್ಯಮಾಪನ ಮಾಡಿದರು. ಇದರ ಪರಿಣಾಮವಾಗಿ ನಾವು ಸಂಪರ್ಕಿಸದೆ ಇದ್ದ ಶಾಲೆಗಳವರು ನಮ್ಮ ಬಳಿ ಬಂದು ಇಂತಹ ಕೆಲಸಗಳನ್ನು ತಮ್ಮ ಶಾಲೆಗಳನ್ನು ಕೂಡ ಸೇರಿಸಿಕೊಂಡು

ಮಾಡುವಂತೆ ಹೇಳಿದರು. ಸ್ಥಳೀಯ ಸನ್ನಿವೇಶಗಳನ್ನು ಒಳಗೊಂಡು ಕಲಿಕೆಗೆ ಹೆಚ್ಚಿನ ಅವಕಾಶಗಳನ್ನು ಒದಗಿಸುವ ಬಗ್ಗೆ ಅವರು ತಿಳಿದಿದ್ದರು ಎಂಬುದನ್ನು ಪ್ರಕಟ ಪಡಿಸಿದರು. ಆದರೂ ಅವರು ತರಗತಿಗಳೆಂಬ ಸಾಂಪ್ರದಾಯಿಕ ಕಲ್ಪನೆಗೆ ಜೋತುಬಿದ್ದಿದ್ದರು. ಮಕ್ಕಳು ಕೆಲಸದ ನಡುವೆ ಎದುರಿಸಿದ ಮತ್ತೊಂದು ಸಮಸ್ಯೆಯೆಂದರೆ ಲಿಂಗ ತಾರತಮ್ಯ. ಹುಡುಗ ಹುಡುಗಿಯರನ್ನೊಳಗೊಂಡ ಮಿಶ್ರ ಗುಂಪನ್ನು ಕಂಡು ಕೆಲವು ಗ್ರಾಮಗಳಲ್ಲಿನ ಹಿರಿಯರು ತಡೆದು ಹೀಗೆ ಒಟ್ಟಾಗಿ ಯಾಕೆ ಸುತ್ತಾಡುತ್ತಿದ್ದೀರಿ ಎಂದು ಕೇಳಿದ್ದಾರೆ.

ಈ ಪ್ರಯೋಗದಿಂದ ಅವರು ಹೊಸದನ್ನು ಅಥವಾ ಉತ್ತಮ ರೀತಿಯಲ್ಲಿ ಏನಾದರೂ ಕಲಿತರೇ ಎನ್ನುವ ಪ್ರಶ್ನೆಗೆ ಮಕ್ಕಳು ಒಕ್ಕೊರಲಿನಿಂದ ಹೌದೆಂದು ಉತ್ತರಿಸಿದರು. ಈ ಪ್ರಕ್ರಿಯೆಯಲ್ಲಿ ಅವರಿಗೆ ತಾವು ದಿನವೂ ಅನೇಕ ಸಂಗತಿಗಳನ್ನು ಗಮನಿಸುತ್ತಿದ್ದರೂ ಆ ಬಗ್ಗೆ ಅವರು ಅಜ್ಞಾನಿಗಳಾಗಿದ್ದರು, ಅವರಿಗೆ ಆ ಕುರಿತು ಹೆಚ್ಚು ತಿಳಿದಿರಲಿಲ್ಲ ಎನ್ನುವುದು ಅರಿವಾಯಿತು. ಹಳ್ಳಿಯ ಜನ ಏನು ಕೆಲಸ ಮಾಡುತ್ತಾರೆ ಎನ್ನುವ ಪ್ರಶ್ನೆಗೆ ಸಾಮಾನ್ಯವಾಗಿ 'ಕೃಷಿ' ಎನ್ನುವುದೇ ಉತ್ತರವಾಗಿತ್ತು. ಆದರೆ ಅವರು ಜನರ ಉದ್ಯೋಗಗಳ ಅಥವಾ ಮಾಡುವ ಕೆಲಸಗಳ ಪಟ್ಟಿ ಮಾಡಲು ಆರಂಭಿಸಿದಾಗ ಅವರಿಗೆ ಇನ್ನೂ ಅನೇಕ ಪ್ರವರ್ಗದ ಉದ್ಯೋಗಗಳಿರುವುದು ಕಂಡುಬಂತು. ಹಾಗಾಗಿ ಅವರಿಗೆ ಕೊಟ್ಟ ನಮೂನೆಯು ಅವಕಾಶದಿಂದ ಅವರಿಗೆ ಹಲವು ಸಂಗತಿಗಳನ್ನು ಹೆಚ್ಚು ವ್ಯವಸ್ಥಿತ ರೀತಿಯಲ್ಲಿ ಗಮನಿಸಲು ಅವಕಾಶ ಮಾಡಿಕೊಟ್ಟಿತು. ಇದರಿಂದ ಅವರು ಹಲವು ಹೊಸ ವಿಷಯಗಳನ್ನು ಕಲಿಯಲು ನೆರವಾಯಿತು.

ದೈನಿಕವೇಳಾಪಟ್ಟಿಗಳು ಲಿಂಗಾಧಾರಿತ ಕೆಲಸಗಳು ಹಾಗೂ ಕೆಲಸಗಳ ಹೊರೆಯಲ್ಲಿರುವ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳಲು ನೆರವಾಯಿತು. ಕೆಲವು ಶಾಲೆಗಳಲ್ಲಿ ಮಕ್ಕಳೊಂದಿಗೆ ಈ ವಿಷಯಗಳನ್ನು ಚರ್ಚಿಸಲು ನಮಗೆ ಅವಕಾಶ ಸಿಕ್ಕಿತು. ತಮ್ಮ ದೈನಿಕವೇಳಾಪಟ್ಟಿಗಳ ಮಾಹಿತಿಯನ್ನು ಸಂಗ್ರಹಿಸಿದ ಮಕ್ಕಳು ತಮ್ಮ ಕುಟುಂಬಗಳಲ್ಲಿ ಅತಿಹೆಚ್ಚಿನ ಕೆಲಸಗಳನ್ನು ಹೆಂಗಸರು/ಹುಡುಗಿಯರು ಮಾಡುತ್ತಾರೆ ಎನ್ನುವುದನ್ನು ಸರ್ವಾನುಮತದಿಂದ ಒಪ್ಪಿಕೊಂಡರು. ಕೆಲಸದಲ್ಲಿನ ಲಿಂಗತಾರತಮ್ಯ ಸರಿಯೇ ಎನ್ನುವ ಪ್ರಶ್ನೆಗೆ ಬಹುತೇಕ ಎಲ್ಲರಿಗೂ ಅದು ಅನ್ಯಾಯ ಎಂದು ಅನ್ನಿಸಿತು. ಲಿಂಗಾಧಾರಿತ ವಿಷಯಗಳನ್ನು ಈ ಶಾಲೆಗಳಲ್ಲಿನ ಮಕ್ಕಳೊಡನೆ ಚರ್ಚಿಸಲು ಇದೊಂದು ಅದ್ಭುತವಾದ ಶೈಕ್ಷಣಿಕ ಸಲಕರಣೆ ಆಗಬಲ್ಲದು ಎಂದು ನಾವು ಕಂಡುಕೊಂಡೆವು.

ಮಕ್ಕಳು ಸಂಗ್ರಹಿಸಿದ ಮಾಹಿತಿಯ ವಿಶ್ಲೇಷಣೆಯು ಒಂದು ಆಸಕ್ತಿಕರವಾದ ವಿಷಯವನ್ನು ತಿಳಿಸಿಕೊಟ್ಟಿತು. ಮಾಹಿತಿಯ ಗುಣಮಟ್ಟ ಕೂಡ ಸಾಕಷ್ಟು ಉತ್ತಮವಾಗಿತ್ತು. ಸರ್ಕಾರಿ ಇಲಾಖೆಗಳಿಂದ ಪಡೆದ ಮಾಹಿತಿಯಲ್ಲಿ ಬಹಳಷ್ಟು ಅಪೂರ್ಣ ಮಾಹಿತಿಯಿತ್ತು ಅಂದರೆ ಗ್ರಾಮದಲ್ಲಿನ ಭೂಬಳಕೆಯ ವಿನ್ಯಾಸವನ್ನು ಕುರಿತು ಪಟ್ವಾರಿಯಿಂದ ಪಡೆದ ಮಾಹಿತಿ ಅಪೂರ್ಣವಾಗಿರುತ್ತಿತ್ತು. ಸರ್ಕಾರಿ ವ್ಯವಸ್ಥೆಯಲ್ಲಿನ ಅಧಿಕೃತ ರಹಸ್ಯ ಎನ್ನುವುದು ಗ್ರಾಮದ ಮಟ್ಟದಲ್ಲೂ ಅನುಸರಣೆಯಲ್ಲಿ ಇರುವುದು ಕಂಡುಬಂದಿತು.

ಒಟ್ಟಿನಲ್ಲಿ ಈ ಪ್ರಕ್ರಿಯೆಯಲ್ಲಿ ಮಕ್ಕಳು ಖುಷಿಯಾಗಿ ಭಾಗವಹಿಸಿದರು ಎಂಬುದು ಸ್ಪಷ್ಟ. ತಂಡಗಳಲ್ಲಿ ಕೆಲಸ ಮಾಡುವುದು, ಮಾಹಿತಿಗಳ ಮೂಲ, ತಾವಿರುವ ನಿಕಟ ಸಮಾಜ ಹಾಗೂ ಪರಿಸರದ ಅರಿವು ಮೊದಲಾದ ಕೆಲವಿಷಯಗಳನ್ನು ಕಲಿಯುವ ಅವಕಾಶವನ್ನು ಪಡೆದರು. ಇದರೊಂದಿಗೆ ಈ ಪ್ರಕ್ರಿಯೆಯಲ್ಲಿ ಅವರು ತಮ್ಮ ಸಂವಹನ ಕಲೆ ಹಾಗೂ ಸಂಧಾನ ಕಲೆಯನ್ನು ಬಳಸಿದರು. ಹುಡುಗನೊಬ್ಬ 'ಸಂಶೋಧಕರಿಗೆ ಸಹಾಯ ಮಾಡಿದ್ದಕ್ಕೆ ಖುಷಿಯಾಯಿತು' ಎಂದು ಹೇಳಿದ. ಅವನ ಪ್ರಕಾರ ಆ ಸಂಶೋಧಕ 'ಗಂಭೀರ' ಅಥವ 'ಮುಖ್ಯ'ವಾದ ಕೆಲಸ ಮಾಡುತ್ತಿದ್ದರು. ನಾವು ಸಾಧಿಸಿದ ಉಳಿದೆಲ್ಲ ವಿಷಯಗಳೇನೇ ಇರಲಿ ಮಕ್ಕಳಲ್ಲಿ ತಾವೂ ಮುಖ್ಯ ಕೆಲಸದಲ್ಲಿ ಸಹಭಾಗಿಗಳು ಎಂಬ ಒಂದು ಭಾವನೆ ಬಂದದ್ದು ನೋಡಿ ನಮ್ಮ ಶ್ರಮ ಸಾರ್ಥಕವಾಯಿತು ಎನಿಸಿತು.

---

**ಸುರೇಶ್** ಅವರು ಅಜೀಂ ಪ್ರೇಮ್‌ಜಿ ಫೌಂಡೇಶನ್ನಿನ ಜಿಲ್ಲಾ ಸಂಸ್ಥೆ, ಧಮ್ತರಿಯೊಂದಿಗೆ ಕೆಲಸ ಮಾಡುತ್ತಿದ್ದಾರೆ ಮತ್ತು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಜೀವನೋಪಾಯ ಉಪಕ್ರಮದ (Livelihood Initiative) ಭಾಗವಾಗಿದ್ದಾರೆ. ಅವರು ಪ್ರಸ್ತುತ ದಮ್ತರಿ ಜಿಲ್ಲೆಯ ಗ್ರಾಮೀಣ ಜನರ ಜೀವನೋಪಾಯ ನಕ್ಷೆ ರಚಿಸುವ ಮತ್ತು ಅವರ ಜೀವನೋಪಾಯ ಆಯ್ಕೆಗಳನ್ನು ಅರ್ಥಮಾಡಿಕೊಳ್ಳುವ ಸಂಶೋಧನೆಯಲ್ಲಿ ತೊಡಗಿದ್ದಾರೆ. ಅವರು ಈ ಹಿಂದೆ ಅಭಿವೃದ್ಧಿ ಕ್ಷೇತ್ರದಲ್ಲಿ ಹೆಚ್ಚಾಗಿ ಕೃಷಿ–ಜೀವವೈವಿಧ್ಯ ಆಹಾರ ಸುಭದ್ರತೆ, ದೇಶೀಯ ಸಾಂಪ್ರದಾಯಿಕ ಜ್ಞಾನ ಮತ್ತು ವಿಕೇಂದ್ರೀಕೃತ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಮುಂತಾದ ವಿಷಯಗಳನ್ನು ಕುರಿತು ಕೆಲಸ ಮಾಡಿದ್ದಾರೆ. ಅವರನ್ನು suresh.sahu@azimpremjifoundation.org ನಲ್ಲಿ ಸಂಪರ್ಕಿಸಬಹುದು.

**ರಾಕೇಶ್** ಅವರು ಅಜೀಂ ಪ್ರೇಮ್‌ಜಿ ಫೌಂಡೇಶನ್ನಿನ ಜಿಲ್ಲಾ ಸಂಸ್ಥೆ, ಧಮ್ತರಿಯೊಂದಿಗೆ ಕೆಲಸ ಮಾಡುತ್ತಿದ್ದಾರೆ ಮತ್ತು ಪ್ರಸ್ತುತ ಸಾಮಾಜಿಕ ವಿಜ್ಞಾನ ತಂಡದ ಭಾಗವಾಗಿದ್ದಾರೆ. ಜಿಲ್ಲೆಯ ಕೆಲವು ಆಯ್ದ ಶಾಲೆಗಳೊಂದಿಗೆ ಕೆಲಸ ಮತ್ತು ಶಿಕ್ಷಣದ ಪರಿಕಲ್ಪನೆಯಲ್ಲಿ ಕೆಲಸ ಮಾಡುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ಹಿಂದೆ ಅವರು ಛತ್ತೀಸ್ಗಢ್ ಬುಡಕಟ್ಟು ಪ್ರದೇಶಗಳಲ್ಲಿ ಅಭಿವೃದ್ಧಿ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ಅವರ ಆಸಕ್ತ ಕ್ಷೇತ್ರಗಳ ವೈವಿಧ್ಯಮಯ ಸಾಮಾಜಿಕ ಸಂದರ್ಭಗಳು ಮತ್ತು ಸಾಂಸ್ಕೃತಿಕ ಅಭ್ಯಾಸಗಳನ್ನು ಅರ್ಥಮಾಡಿಕೊಳ್ಳುವುದು ಸೇರಿದೆ. ಅವರನ್ನು rakesh.teta@azimpremjifoundation.org ನಲ್ಲಿ ಸಂಪರ್ಕಿಸಬಹುದು.

**ಗುಲ್ಶನ್** ಅವರು ಅಜೀಂ ಪ್ರೇಮ್‌ಜಿ ಫೌಂಡೇಶನ್ನಿನ ಜಿಲ್ಲಾ ಸಂಸ್ಥೆ, ಧಮ್ತರಿಯಲ್ಲಿ 2013 ರಿಂದ ಫೆಲೋ ಆಗಿ ಕೆಲಸ ಮಾಡುತ್ತಿದ್ದಾರೆ. ಮಾರ್ಕೆಟಿಂಗ್ ಮತ್ತು ಮಾನವ ಸಂಪನ್ಮೂಲ ವಿಷಯದಲ್ಲಿ ಪರಿಣತಿ ಪಡೆದು ವ್ಯವಹಾರ ಆಡಳಿತದಲ್ಲಿ ಸ್ನಾತಕೋತ್ತರ ಪದವಿ (Master's degree in Business Administration) ಪಡೆದಿದ್ದಾರೆ ಮತ್ತು ಮ್ಯಾನೇಜ್ಮೆಂಟ್ನಲ್ಲಿ ಎಂ. ಫಿಲ್ ಪದವಿ ಪಡೆದಿದ್ದಾರೆ. ಈ ಹಿಂದೆ ಅವರು ಕಂಪ್ಯೂಟರ್ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ಅವರನ್ನು ulshan.yadav@azimpremjifoundation.org ನಲ್ಲಿ ಸಂಪರ್ಕಿಸಬಹುದು. **ಅನುವಾದಕರು**: ಹೇಮಾ ಹೆಬ್ಬಗೋಡಿ, **ಪರಿಶೀಲನೆ**: ಆನಂದ ಡಿ.